## ನಕ್ಕುಬಿಡಿ

ಟೀಚರ್: ಪುಂಡಲೀಕ! ವಾಟರ್‌ನ ಕೆಮಿಕಲ್ ನೇಮ್ ಏನೋ?

ಪುಂಡಲೀಕ: ಹೆಚ್.ಐ.ಜೆ.ಕೆ.ಎಲ್.ಎಮ್.ಎನ್.ಓ.

ಟೀಚರ್: ಏನ್ ಹೇಳ್ತಾ ಇದ್ದಿಯೋ?

ಪುಂಡಲೀಕ: ನೀವೇ ಅಲ್ಲವಾ ಟೀಚರ್... ವಾಟರ್‌ನ ಕೆಮಿಕಲ್ ನೇಮ್ ಹೆಚ್ ಟು ಓ ಅಂತ ಹೇಳಿದ್ದು!

★★★

ಪುಂಡಲೀಕ: ನಮ್ಮ ಪಪ್ಪಿ ಬಹಳ ಒಳ್ಳೆಯದು ಕಣಯ್ಯಾ.

ಶಿಂಗಲೀಕ: ಯಾಕೇಂತಾ?

ಪುಂಡಲೀಕ: ಬೆಳಿಗ್ಗೆ ನಾನು ಎದ್ದು ಗಾರ್ಡನ್‌ಲ್ಲಿ ಕುಳಿತಿದ್ದರೆ ಅದು ನನಗೆ ಓದಲು ಪೇಪರ್ ತಂದುಕೊಡುತ್ತದೆ!

ಶಿಂಗಲೀಕ: ಅದರಲ್ಲೇನಿದೆ... ಎಲ್ಲಾ ನಾಯಿಗಳೂ ಅದನ್ನು ಮಾಡುತ್ತವೆ!

ಪುಂಡಲೀಕ: ನಾನು ಮನೆಗೆ ಪೇಪರೇ ತರಿಸೊಲ್ಲ!

(ಸಂಗ್ರಹ) **ಜಿ.ವಿ. ಪ್ರಭು, ಬೆಂಗಳೂರು**

ಒಂದು ಗಂಟೆಯಿಂದ ಬಸ್ಸಿನೊಳಗೆ ಕುಳಿತಿದ್ದ ಗುಂಡ ಸಿಗರೇಟ್ ಸೇದಿಕೊಂಡು ಬರುತ್ತಿದ್ದ ಕಂಡಕ್ಟರ್‌ಗೆ– 'ಈ ಡಬ್ಬ ಯಾವಾಗ ಹೊರಡುತ್ತದೆ?' ಎಂದು ಕೇಳಿದ.

ಕಂಡಕ್ಟರ್: ಕಸ ಪೂರ್ತಿ ತುಂಬಿದ ತಕ್ಷಣ ಸಾರ್!

★★★

ನಟ: ಮೇಡಂ ನನಗೆ ಒಂದೇ ಒಂದು ಸಲ ನಿಮ್ಮ ನವಿರಾದ ತಲೆಗೂದಲನ್ನು ಒಂದು ಗಂಟೆ ಕಾಲ ನೇವರಿಸುತ್ತ ಕಾಲ ಕಳೆಯಬೇಕೆಂಬ ಆಸೆ.

ನಟಿ 'ಒಂದು ಗಂಟೆ ಯಾಕೆ? ಇಡೀ ದಿನ ನೇವರಿಸುತ್ತ ಕುಳಿತಿರಬಹುದು! ತೆಗೆದುಕೊಳ್ಳಿ' ಎನ್ನುತ್ತ ಅವಳ ತಲೆಯ ಮೇಲಿದ್ದ ವಿಗ್ ಕಳಚಿ ಕೊಟ್ಟಳು.

★★★

ಲೆಕ್ಚರರ್: ಸೈಲೆನ್ಸ್! ಏನಿದು ವಟ ವಟ ಗಲಾಟೆ?

ವಿದ್ಯಾರ್ಥಿ: ಸಾರ್ ದೆವ್ವ ಇದೆಯೋ ಇಲ್ಲವೋ?

ಲೆಕ್ಚರರ್: ಮದುವೆ ಆದ ಮೇಲೆ ಈ ಪ್ರಶ್ನೆನ ಕೇಳು. ಈಗ ಕುಳಿತುಕೋ.

(ಸಂಗ್ರಹ) **ಎಂ.ಕೆ. ಮಂಜುನಾಥ್, ಬೆಂಗಳೂರು**





ಸಂಜೆ ಕತ್ತಲಲ್ಲಿ ಕಬ್ಬನ್‌ಪಾರ್ಕಿನಲ್ಲಿ ಒಂಟಿಯಾಗಿ ಹೋಗುತ್ತಿದ್ದ ಸಂತಾನನ್ನು ಅಡ್ಡಗಟ್ಟಿದ ವ್ಯಕ್ತಿ ಕೇಳಿದ– 'ಸಾರ್!... ಇಲ್ಲೆಲ್ಲಾದ್ರೂ ಹತ್ತಿರದಲ್ಲಿ ಪೊಲೀಸರು ಹೋದರಾ...?'

'ಇಲ್ಲಾ ಸ್ವಾಮಿ...! ಒಂದೇ ಒಂದು ನರಪಿಳ್ಳೆನೂ ಕಾಣ್ತಾ ಇಲ್ಲಾ!'

ಸಂತಾ ಹೇಳಿದ್ದೇ ತಡ, ಆ ವ್ಯಕ್ತಿ 'ಬಡ್ಡಿಮಗನೇ, ಬಾಯಿ ಮುಚ್ಚಿಕೊಂಡು ಕೈಲಿರೋ ವಾಚು, ಉಂಗುರ, ಜೇಬಲ್ಲಿರೊ ದುಡ್ಡು ಹಾಗೂ ಮೊಬೈಲು ತೆಕ್ಕೊಡು– ಇಲ್ದೆ ಇದ್ರೆ ರೇಜರ್ ಹಾಕಿಬಿಡ್ತೇನೆ ಎಂದ.'

ಪಾಪ! ಸಂತಾ ಎಲ್ಲವನ್ನು ಸದ್ದಿಲ್ಲದೇ ಕಳಚಿಕೊಟ್ಟ.

★★★

ವಿದ್ಯಾರ್ಥಿ: ನಾನು ಮಾಡದೆ ಇರುವ ಕೆಲಸಕ್ಕಾಗಿ ನನಗೆ ಶಿಕ್ಷೆ ಕೊಡ್ತೀರಾ ಮೇಡಂ?

ಮೇಡಂ: ಮಾಡದೆ ಇದ್ದ ಕೆಲ್ಸಕ್ಕೆ ಯಾಕೆ ಶಿಕ್ಷೆ ಕೊಡಲಿ?

ವಿದ್ಯಾರ್ಥಿ: ಹಾಗಿದ್ದರೆ ನಾನು ಹೇಳ್ತೀನಿ; ನಾನಿವತ್ತು ಹೋಂವರ್ಕ್ ಮಾಡಿಲ್ಲ ಮೇಡಂ!

(ಸಂಗ್ರಹ) **ಎನ್.ಎಸ್.ಆನಂದ್, ಬೆಂಗಳೂರು**

**ಕೋಬ್ರ**

'ಅಪ್ಪ, ಅಪ್ಪಾ ಕೋಬ್ರ ಬರ್ತಾಯಿದೆ, ಕೋಬ್ರ.'

ತಂದೆ: ಎಲ್ಲೋ, ಹುಷಾರು, ಕೋಬ್ರ ಹತ್ತಿರ ಹೋಗಬಾರದು. ಹಾವು ಕಚ್ಚಿದರೆ ಜೀವಕ್ಕೇ ಅಪಾಯ.

ಮಗ: ಕೋಬ್ರ ಎಂದರೆ ಹಾವು ಅಲ್ಲಪ್ಪ, ನಿನ್ನ ಸಡ್ಡಕ ಕೋಬ್ರದರ್ ಬರ್ತಾಯಿರೋದು!

★★★

**ಕಪಾಳಮೋಕ್ಷ**

'ಸಾಹೇಬರೇ ಅಮ್ಮಾವರು ನನ್ನ ಕೆನ್ನೆಗೆ 'ಛಟೀರನೆ' ಹೊಡೆದುಬಿಟ್ಟರು. ಅಳು ಬಂದುಬಿಡ್ತು. ಅಳುತ್ತಾ ಇದ್ದೇನೆ' ಎಂದ ಗಂಡಾಳು.

ಸಾಹೇಬರು: ಅದಕ್ಕೇನೀಗ? ನಾನೆಂದಾದರೂ ಅತ್ತಿದ್ದನ್ನು ನೀನು ನೋಡಿದ್ದೀಯಾ?

(ಸಂಗ್ರಹ) **ಎ.ಕೆ. ಪಟ್ಟಾಭಿ, ಬೆಂಗಳೂರು**